ಮೈಸೂರ ಗೆಜೆಟ್ಟ್

362

ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಜನವರಿ ತಾ|| 5, ಸ್ಯ 1889.

ಸೂ— ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರಿಸಿಡೆಂಟರು, ಚೀಫ್ ಜಡ್ಜ್ಗಳು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಇನಾಂ ಇಲಾಖಾ.

ಇಸ್ತಿಹಾರ್ ನಾಮೆ.

ನಂಬರ್ 2. ತಾರೀಖು 14ನೇ ಡಿಸೆಂಬರ್ 1888.

ಇನಾಂದಾರ್ರಿಗೆ ಇದರಿಂದ ತಿಳಿಯಪಡಿಸುವದೇನಂದರೆ, ಮಾವಗಡ ತಾಲ್ಲೂಕಿನಲ್ಲಿ ಯಿರತಕ್ಕ ಬಿಲ್ಲರೆ ಇನಾಂಗಳ ಬಾಬತು (554) ಫೈನಲ್ ಟೈಟಲ್ ಡೀಡ್ಯಾನೆ ಕಾಯಂ ಪಟ್ಟಿಗಳು ತುಮಕೂರು ಡಿಸ್ಟ್ರಿಕ್ಟ್ ಡೆವ್ಯೂಟಿ ಕಮ್ಮಿಷನರವರಿಗೆ ಬಟವಾಡೆ ಬ್ಯೆ ಈ ತಾರೀಖಿ ನಲ್ಲಿ ಕಳುಹಿಸಲ್ಪಟ್ಟವೆ.

2. ಸದರೀ ತಾಲ್ಲೂಕಿನ ಅಮಲ್ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್ ಬಂದ ಮೇಲೆ ಅವುಗಳನ್ನು ತೆಗದುಕೊಳ್ಳುವ ಬ್ಯೆ ಸದರೀ ಇನಾಂದಾರರು ಏರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರಿ ತಾಲ್ಲೂಕಿನ ಅಮಲ್ದಾರ್ರು ಅಂಥಾ ನೋಟೀಸ್ಗಳನ್ನು ದೇರವಾಡ ದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಯಿರುತ್ತಾರೆ.

3. ಸದರೀ ಬಿಲ್ಲರೆ ಇನಾಂಗಳ ಬ್ಯೆ ಈ ಆಫೀಸ್ 23ನೇ ನಂಬರ್ 1882ನೇ ಇಸವಿ ಜನವರೀ 17ನೇ ತಾರೀಖಿನ ಇಸ್ತಿಹಾರ್ ನಾಮೆ ಪ್ರಕಾರ ಕೊಡಲ್ಪಟ್ಟ ಪಟ್ಟಿಗಳು ರದ್ದುವಾಡಲ್ಪಟ್ಟು ಯಿರುತ್ತೆಂದು ಇದರ ದೆಕೆಯಿಂದ ಪ್ರಕಟಿಸಲ್ಪಟ್ಟು ಯಿರುತ್ತೆ.

ಜೆ. ಪಿ. ಗ್ರಾಂಟ್,
ಇನಾಂ ಸೂಪರಿಂಟಿಂಡೆಂಟ್.

ಫಾರೆಸ್ಟ್ ಇಲಾಖಾ.

ತಾರೀಖು 27ನೇ ನವಂಬರ್ 1888.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡೀಕಂಡ ಡಿಪೋಗಳಲ್ಲಿ ಅವುಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ನಾಲಾಯಖ್ ವರಟುತೇಗು ತುಂಡುಗಳು ಮತ್ತು ಇತರ ಜಾತಿ ಚಾಬೀನಾ ಸಹ ಬಹಿರಂಗವಾದ ಹರಾಜಿ ಮೂಲಕ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಮತ್ತು ಗವರ್ನಮೆಂಟ್ ಫಾರಂಸ್ ಸೂಪರಿಂಟಿಂಡೆಂಟ್ ಸಾಹೇಬರವರಿಂದ ವಿಕ್ರಯಿಸಲ್ಪಡುತ್ತೆ.

ಡಿಪೋಗಳ ಹೆಸರು.	ತಾಲ್ಲೂಕುಗಳ ಹೆಸರು.	ಹರಾಜ್ ತಾರೀಖು.	ಮೊತ್ತ (ಹೆಚ್ಚು ಕಡಿಮೆಯಾಗಿ.)	ವರಾ.
			ಸಲೆಅಡಿ.	
ಹುರದ ಡಿಪೋ ..	ನಂಜಿನಗೂಡು	10ನೇ ಜನವರಿ 1889	3616	ತೇಗು, ಹೊನ್ನೆ, ಮತ್ತಿ, ಕಾಡುಜಾತಿ ಜಂತಿ, ಸರ ಮತ್ತು ಮುಂಡಿಗೆಗಳು.
ಹಂಗಳದ ಡಿಪೋ ..	ಗುಂಡ್ಲುಪೇಟೆ	14ನೇ ಡಿಟೋ 89	2155	
ಮದ್ದೂರು ಡಿಪೋ ..	ಡಿಟೋ	15ನೇ ಡಿಟೋ 89	20550	

ನಿಬಂಧನೆಗಳು—ಹರಾಜು ಕಾಲದಲ್ಲಿ ರಿರ್ವಾ ಸಾಹೆಬರವರ ಆಗಸ್ಟು 30ನೇ ಮತ್ತು 99ನೇ ನಂಬರ್ ನೋಟೀಫಿಕೇರ್ಷ ಓದಲ್ಪಡುವದು.